

# ಪಲಾಜೊ ಎಲ್ಲ ಕಾಲಕ್ಕೂ...

ಪಲಾಜೊ ಈಗ ಸರ್ವವ್ಯಾಪಿಯಾಗಿದೆ. ಚಿಕ್ಕಮಕ್ಕಳು, ಪ್ರೌಢಶಾಲೆಗೆ ಹೋಗುವ ಹುಡುಗಿಯರು, ಕಾಲೇಜು ಮೆಟ್ಟಿಲು ಹತ್ತಿದವರು, ಉದ್ಯೋಗಸ್ಥ ಯುವತಿಯರು, ಗೃಹಿಣಿಯರು, ಮಧ್ಯ ವಯಸ್ಕರು, ವೃದ್ಧೆಯರು... ಹೀಗೆ ಎಲ್ಲ ವಯೋಮಾನದವರನ್ನೂ ತನ್ನತ್ತ ಹಿಡಿದಿಟ್ಟಿರುವ ಪಲಾಜೊ, ಥರಾವರಿ ಶೈಲಿಯಲ್ಲಿ ರೂಪುತಳೆದು ತೊಟ್ಟವರಿಗೆ ಆರಾಮದಾಯಕ ಅನುಭವ ನೀಡುತ್ತದೆ.

■ ಸುಮಾ ಬಿ.

'ಈಸಲ ಹಬ್ಬಕ್ಕೆ ಪಲಾಜೊ ಪ್ಯಾಂಟ್– ಕುರ್ತಾ ಕೊಡಿಸಮ್ಮ. ಯುಗಾದಿಗೆ ಪಕ್ಕದ ಮನೆ ಧೃತಿ ತೊಟ್ಟಿದ್ದ ಪಲಾಜೊ ಡ್ರೆಸ್ ಚೆನ್ನಾಗಿತ್ತು. ನಂಗೂ ಅಂಥದ್ದೇ ಬೇಕು...' ಎಂಟು ವರ್ಷದ ಮಗಳು ಇಂತಹದ್ದೊಂದು ಬೇಡಿಕೆ ಇಟ್ಟಾಗ ಅಮ್ಮನಿಗೆ ಅಚ್ಚರಿ. 'ದೊಡ್ಡವರಿಗಷ್ಟೇ ಪಲಾಜೊ' ಎಂದೆಣಿಸಿದ್ದ ಅಮ್ಮನಿಗೆ ಚಿಕ್ಕ ಮಗಳನ್ನೂ ಆಕರ್ಷಿಸಿದ್ದು ಹುಬ್ಬೇರುವಂತೆ ಮಾಡಿತ್ತು.

ಹೌದು... ಪಲಾಜೊ ಈಗ ಸರ್ವವ್ಯಾಪಿಯಾಗಿದೆ. ಚಿಕ್ಕಮಕ್ಕಳು, ಪ್ರೌಢಶಾಲೆಗೆ ಹೋಗುವ ಹುಡುಗಿಯರು, ಕಾಲೇಜು ಮೆಟ್ಟಿಲು ಹತ್ತಿದವರು, ಉದ್ಯೋಗಸ್ಥ ಯುವತಿಯರು, ಗೃಹಿಣಿಯರು, ಮಧ್ಯ ವಯಸ್ಕರು, ವೃದ್ಧೆಯರು... ಹೀಗೆ ಎಲ್ಲ ವಯೋಮಾನದವರನ್ನೂ ತನ್ನತ್ತ ಹಿಡಿದಿಟ್ಟಿರುವ ಪಲಾಜೊ, ಥರಾವರಿ ಶೈಲಿಯಲ್ಲಿ ರೂಪುತಳೆದು ತೊಟ್ಟವರಿಗೆ ಆರಾಮದಾಯಕ ಅನುಭವ ನೀಡುತ್ತದೆ.

ಜೀನ್ಸ್, ಲೆಗ್ಗಿನ್ಸ್, ಜಗ್ಗಿನ್ಸ್, ಪೆನ್ಸಿಲ್‌ಕಟ್ ಪ್ಯಾಂಟ್, ಆ್ಯಂಕಲ್ ಲೆಂತ್ ಪ್ಯಾಂಟ್, ಪಲಾಜೊ, ಪಟಿಯಾಲ... ಹೀಗೆ ಕುರ್ತಾಗಳೊಂದಿಗೆ ಬಾಟಮ್ ವೇರ್‌ಗಳ ಆಯ್ಕೆಗಳು ಹಲವು. ಫ್ಯಾಷನ್‌ನ ಓಘದಲ್ಲಿ ಇವೆಲ್ಲವೂ ಟ್ರೆಂಡ್ ಸೃಷ್ಟಿಸಿ, ಕೆಲವು ಮಿಂಚಿ ಮರೆಯಾಗುತ್ತಿವೆ. ಆದರೆ ಪಲಾಜೊ ಹಲವು ವರ್ಷಗಳಿಂದ ಹೊಳಪು ಕಳೆದುಕೊಂಡಿಲ್ಲ. ವಿನ್ಯಾಸಕಾರರ ಕೈಯಲ್ಲಿ ಹೊಸ ವಿನ್ಯಾಸ, ಹೊಸ ರೂಪು ತಳೆದು ಟ್ರೆಂಡ್ ಸೃಷ್ಟಿಸುತ್ತಿದೆ. ಕಾಟನ್, ಲೆನಿನ್, ಜಾರ್ಜೆಟ್, ಸಿಂಥೆಟಿಕ್, ಸಿಲ್ಕ್ ಹೀಗೆ ಎಲ್ಲ ಬಗೆಯ ಬಟ್ಟೆಗಳಲ್ಲಿ ತಯಾರಾಗುವ ಪಲಾಜೊ ಪ್ಯಾಂಟ್ ಆಧುನಿಕ ಸ್ಪರ್ಶದೊಂದಿಗೆ ದೇಸಿತನ, ಸಾಂಪ್ರದಾಯಿಕ ಉಡುಪಿಗೂ ಸೈ ಎನಿಸಿದೆ. ಮೇಲೊಂದು ಕುರ್ತಾ, ಅದಕ್ಕೊಪ್ಪುವ ಪಲಾಜೊ ಇದ್ದರೆ ಸಾಕು ಅಂದಿನ ಫ್ಯಾಷನ್ ಸಂಪನ್ನ ಎನ್ನುತ್ತದೆ ಯುವ ಮನ.

## ಆರಾಮದಾಯಕ ಉಡುಪು

ಪಲಾಜೊವನ್ನು ಬಹುತೇಕರು ಅಪ್ಪಿಕೊಳ್ಳಲು ಕಾರಣವೂ ಉಂಟು. ತೊಟ್ಟರೆ ದೇಹಕ್ಕೆ ಬಿಗಿ ಅನುಭವ ನೀಡದ, ಆರಾಮದಾಯಕವಾಗಿ ಗಾಳಿಯಾಡುವ ಉಡುಪು ಇದಾಗಿದ್ದು, ಬೇಸಿಗೆ, ಚಳಿಗಾಲಕ್ಕೆ ಹೇಳಿಮಾಡಿಸಿದಂತಿದೆ. ಮಳೆಗಾಲದಲ್ಲಿ ರಸ್ತೆಯಲ್ಲಿ ಓಡಾಡುವಾಗ ಪ್ಯಾಂಟನ್ನು ತುಸು ಮೇಲಕ್ಕೆತ್ತಿಕೊಂಡು ಓಡಾಡಿದರಾಯಿತು. ಆದರೂ